**ಕರ್ನಾಟಕ ವಿಧಾನ ಪರಿಷತ್ತಿನ ಮಾನ್ಯ ಸದಸ್ಯರಾದ ಡಾ.ಧನಂಜಯ ಸರ್ಜಿ ಇವರು ನಿಯಮ-72ರಡಿ ನೀಡಿರುವ ಸೂಚನೆಗೆ ಉತ್ತರ.**

**ವಿಷಯ:**

ಶಿವಮೊಗ್ಗ ಜಿಲ್ಲೆಯ ಕುವೆಂಪು ವಿಶ್ವವಿದ್ಯಾಲಯಕ್ಕೆ ಅರಣ್ಯ ಇಲಾಖೆಯಿಂದ ಭೂಮಿ ಹಸ್ತಾಂತರವಾಗಿದ್ದು, ಸದರಿ ಅರಣ್ಯ ಭೂಮಿ ವರ್ಗಾವಣೆಗೆ ಸಂಬಂಧಿಸಿದಂತೆ ಪಾವತಿಸಲು ಬಾಕಿ ಇರುವ 100 ಕೋಟಿಗೂ ಹೆಚ್ಚಿನ ಎನ್.ಪಿ.ವಿ. ಮೊತ್ತ ಮತ್ತು ಈ ವಿಷಯದ ಕುರಿತು ರಾಜ್ಯ ಸರ್ಕಾರದ ಉನ್ನತ ಶಿಕ್ಷಣ ಇಲಾಖೆ, ವಿಶ್ವವಿದ್ಯಾಲಯ ಮತ್ತು ಅರಣ್ಯ ಇಲಾಖೆಯ ನಡುವೆ ಸಮನ್ವಯದ ಕೊರತೆಯಿಂದಾಗಿ ಉದ್ಭವಿಸಿರುವ ಸಮಸ್ಯೆಯ ಕುರಿತು ನಿಯಮ 72ರಡಿ ಗಮನ ಸೆಳೆಯಬಯಸುತ್ತೇನೆ.

**ಉತ್ತರ:-**

ಕಂದಾಯ ಇಲಾಖೆಯ ದಿನಾಂಕ:21-09-1977 ರ ಅಧಿಸೂಚನೆ ಮತ್ತು ಕರ್ನಾಟಕ ಸರ್ಕಾರದ ಆಹಾರ ಮತ್ತು ಅರಣ್ಯ ಇಲಾಖೆಯ ದಿನಾಂಕ:11-05-1987 & 21-02-1979ರ ಅಧಿಸೂಚನೆಗಳಲ್ಲಿ ಮೈಸೂರು ವಿಶ್ವವಿದ್ಯಾಲಯದ ಸ್ನಾತಕೋತ್ತರ ಕೇಂದ್ರವನ್ನು ಸ್ಥಾಪಿಸುವ ಉದ್ದೇಶಕ್ಕಾಗಿ ಭದ್ರಾವತಿ ತಾಲ್ಲೂಕಿನ ಸಿಂಗನಮನೆ ಕಿರುಮೀಸಲು ಅರಣ್ಯ ಪ್ರದೇಶದ 230 ಎಕರೆ ಅರಣ್ಯ ಭೂಮಿಯನ್ನು ಪ್ರತಿ ಎಕರೆಗೆ ವಾರ್ಷಿಕ ರೂ.50/-ಗಳಂತೆ ಬಾಡಿಗೆ ಆಧಾರದಲ್ಲಿ 20 ವರ್ಷಗಳ ಅವಧಿಗೆ ಗುತ್ತಿಗೆ ಆಧಾರದ ಮೇಲೆ 1979ನೇ ಇಸವಿಯಲ್ಲಿ ಮಂಜೂರು ಮಾಡಲಾಗಿತ್ತು.

ಸರ್ಕಾರದ ಅಧಿನಿಯಮದನ್ವಯ ಮೈಸೂರು ವಿಶ್ವವಿದ್ಯಾಲಯವನ್ನು ವಿಭಜಿಸಿ ಶಿವಮೊಗ್ಗ, ಚಿಕ್ಕಮಗಳೂರು ಮತ್ತು ಚಿತ್ರದುರ್ಗ (ಅವಿಭಜಿತ) ಜಿಲ್ಲೆಗಳನ್ನೊಳಗೊಂಡಂತೆ ಬಿ.ಆರ್. ಪ್ರಾಜೆಕ್ಟ್‌ನಲ್ಲಿನ ಮೈಸೂರು ವಿಶ್ವವಿದ್ಯಾಲಯದ ಸ್ನಾತಕೋತ್ತರ ಕೇಂದ್ರದಲ್ಲಿ ದಿನಾಂಕ:29-06-1987ರಂದು ಕುವೆಂಪು ವಿಶ್ವವಿದ್ಯಾಲಯವನ್ನು ಸ್ಥಾಪಿಸಲಾಯಿತು. ಸದರಿ ಸಿಂಗನಮನೆ ಕಿರು ಮೀಸಲು ಅರಣ್ಯ ಭೂಮಿಯಲ್ಲಿ ಶೈಕ್ಷಣಿಕ, ಸಂಶೋಧನೆ, ಆಡಳಿತ ಮತ್ತು ವಸತಿ ನಿಲಯ, ಗ್ರಂಥಾಲಯ, ಒಳಾಂಗಣ ಮತ್ತು ಹೊರಾಂಗಣ ಕ್ರೀಡಾಂಗಣ, ಆಡಿಟೋರಿಯಂ, ವಿದ್ಯಾರ್ಥಿ ಸೌಲಭ್ಯ ಸಮುಚ್ಚಯ, ಸಿಬ್ಬಂದಿ ವಸತಿ ಗೃಹಗಳು ಮುಂತಾದ ಅಗತ್ಯ ಕಟ್ಟಡಗಳನ್ನು ನಿರ್ಮಿಸಲಾಗಿದೆ.

ದಿನಾಂಕ:29-06-1987ರಂದು ಕುವೆಂಪು ವಿಶ್ವವಿದ್ಯಾಲಯವು ಸ್ಥಾಪನೆಯಾದ ನಂತರ ಕರ್ನಾಟಕ ಅರಣ್ಯ (ಸಂರಕ್ಷಣಾ) ಕಾಯ್ದೆ 1980, ದಿನಾಂಕ:25.10.1990ರಲ್ಲಿ ಜಾರಿಗೆ ಬಂದಿದ್ದು, ಸಿಂಗನಮನೆ ಕಿರು ಮೀಸಲು ಅರಣ್ಯವನ್ನು ಭಾರತ ಸರ್ಕಾರದ ದಿನಾಂಕ:09-03-1998ರ ಅಧಿಸೂಚನೆಯಲ್ಲಿ ಭದ್ರಾ ವನ್ಯಜೀವಿ ಅಭಯಾರಣ್ಯವೆಂದು ಘೋಷಿಸಿದ್ದು, ತದನಂತರದ ದಿನಾಂಕ:20-12-2007ರ ಅಧಿಸೂಚನೆಯಲ್ಲಿ ಭದ್ರಾ ಹುಲಿ ಸಂರಕ್ಷಣಾ ಅರಣ್ಯವೆಂದು ಘೋಷಿಸಲಾಗಿದೆ. ಈ ಅಧಿಸೂಚನೆಗಳ ಹಿನ್ನೆಲೆಯಲ್ಲಿ, ಸಿಂಗನಮನೆ ಕಿರು ಮೀಸಲು ಅರಣ್ಯ ಪ್ರದೇಶದಲ್ಲಿದ್ದ ಕುವೆಂಪು ವಿಶ್ವವಿದ್ಯಾಲಯವು ಪ್ರಸ್ತುತ ಭದ್ರಾ ಹುಲಿ ಸಂರಕ್ಷಣಾ ಅರಣ್ಯ ಪ್ರದೇಶದ ವ್ಯಾಪ್ತಿಗೆ ಸೇರ್ಪಡೆಗೊಂಡಿದೆ. 20 ವರ್ಷಗಳ ಗುತ್ತಿಗೆಯ ಒಪ್ಪಂದದ ಅವಧಿಯು ದಿನಾಂಕ: 20-12-1999ಕ್ಕೆ ಮುಕ್ತಾಯಗೊಂಡಿದ್ದ ಹಿನ್ನೆಲೆಯಲ್ಲಿ, ಗುತ್ತಿಗೆ ಒಪ್ಪಂದವನ್ನು 99 ವರ್ಷಗಳಿಗೆ ನವೀಕರಿಸುವಂತೆ ಕುವೆಂಪು ವಿಶ್ವವಿದ್ಯಾಲಯದ ಕುಲಪತಿಗಳು ಅರಣ್ಯ ಇಲಾಖೆಗೆ ಮನವಿ ಸಲ್ಲಿಸಿರುತ್ತಾರೆ.

ವಿಶ್ವವಿದ್ಯಾಲಯವು ಅರಣ್ಯ ಸಂರಕ್ಷಣಾಧಿಕಾರಿ ಮತ್ತು ಕ್ಷೇತ್ರ ನಿರ್ದೇಶಕರು, ಭದ್ರಾ ಹುಲಿ ಯೋಜನೆ ಚಿಕ್ಕಮಗಳೂರು ಇವರಿಗೆ ದಿನಾಂಕ:29-11-2019ರಂದು ಬರೆದ ಪತ್ರದಲ್ಲಿ ಸರ್ಕಾರವು ಬಿಡುಗಡೆ ಮಾಡಿರುವ ಎನ್.ಪಿ.ವಿ. ಮೊತ್ತವನ್ನು ಅರಣ್ಯ ಇಲಾಖೆಗೆ ಪಾವತಿಸಿ ಸರ್ಕಾರಕ್ಕೆ ಉಪಯೋಗತಾ ಪ್ರಮಾಣ ಪತ್ರವನ್ನು ಸಲ್ಲಿಸುವ ಅಗತ್ಯ ಇರುವುದರಿಂದ ಆನ್‌ಲೈನ್ ಪ್ರಕ್ರಿಯೆಯನ್ನು ಬೇಗನೆ ಪೂರ್ಣಗೊಳಿಸಿ ಕೊಡುವಂತೆ ಕೋರಲಾಗಿರುತ್ತದೆ.

.....2

ವಿಶ್ವವಿದ್ಯಾಲಯವು ಎನ್.ಪಿ.ವಿ. ಮತ್ತು ಸಿ.ಎ. ಬಾಬ್ತು ರೂ.14.32 ಕೋಟಿಗಳಷ್ಟು ಮೊತ್ತವನ್ನು ಕೇಂದ್ರ ಸರ್ಕಾರದ ಪರಿಸರ ಮತ್ತು ಅರಣ್ಯ ಇಲಾಖೆಗೆ ಪಾವತಿಸಬೇಕಾಗಿದ್ದು, ಈ ಮೊತ್ತದಲ್ಲಿ ಸರ್ಕಾರದ ದಿನಾಂಕ:19.02.2019ರ ಆದೇಶದಲ್ಲಿ ರೂ.11.00 ಕೋಟಿ ಅನುದಾನವನ್ನು ಬಿಡುಗಡೆ ಮಾಡಲಾಗಿರುತ್ತದೆ. ನಂತರ ಉಳಿದ ಬಾಕಿ ಮೊತ್ತ ರೂ. 3.32 ಕೋಟಿಗಳ ಅನುದಾನವನ್ನು ದಿನಾಂಕ:31.10.2022ರಂದು ಬಿಡುಗಡೆ ಮಾಡಲಾಗಿದ್ದು, ಎರಡು ಕಂತುಗಳು ಸೇರಿ ಸರ್ಕಾರದಿಂದ ಕುವೆಂಪು ವಿಶ್ವವಿದ್ಯಾಲಯಕ್ಕೆ ಒಟ್ಟು 14.32ಕೋಟಿಯಷ್ಟು ಅನುದಾನವನ್ನು ಬಿಡುಗಡೆ ಮಾಡಲಾಗಿರುತ್ತದೆ.

ಈ ಸಂಬಂಧ ಉಪ ಅರಣ್ಯ ಸಂರಕ್ಷಣಾಧಿಕಾರಿ ಮತ್ತು ಕ್ಷೇತ್ರ ನಿರ್ದೇಶಕರು, ಭದ್ರಾ ಹುಲಿ ಸಂರಕ್ಷಿತ ಪ್ರದೇಶ, ಚಿಕ್ಕಮಗಳೂರು ಇವರು ಭಾರತ ಸರ್ಕಾರದ ಅರಣ್ಯ ಸಚಿವಾಲಯ ಮತ್ತು ನವದೆಹಲಿಯ ಅರಣ್ಯ ಇಲಾಖೆಯ AIG(Assistant Inspector General of Forest) ಇವರ ಪತ್ರವನ್ನು ಉಲ್ಲೇಖಿಸಿ ಭದ್ರಾವತಿ ತಾಲ್ಲೂಕು, ಸಿಂಗನಮನೆ ಸರ್ವೆ ನಂ-16, ತಾವರಘಟ್ಟದ ಸರ್ವೆ ನಂ-14 ಮತ್ತು ನರಸಿಂಹರಾಜಪುರ ತಾಲ್ಲೂಕಿನ ಬೈರಾಪುರ ಗ್ರಾಮ ಸರ್ವೆ ನಂ-37ರಲ್ಲಿನ 89.92 ಹೆಕ್ಟರ್ ಅರಣ್ಯ ಭೂಪ್ರದೇಶವನ್ನು ಕುವೆಂಪು ವಿಶ್ವವಿದ್ಯಾಲಯ ಸ್ಥಾಪನೆಗೆ ಮತ್ತು ಶೈಕ್ಷಣಿಕ ಚಟುವಟಿಕೆಗಳನ್ನು ನಡೆಸಲು ಅರಣ್ಯ ಭೂಮಿಯನ್ನು ಕುಲಸಚಿವರ ಹೆಸರಿಗೆ ವರ್ಗಾಯಿಸಲು ಕೆಲವು ಷರತ್ತುಗಳೊಂದಿಗೆ ಸ್ಟೇಜ್-01ರ (In-principle) ಅನುಮೋದನೆ ನೀಡಲಾಗಿರುತ್ತದೆ. ಸ್ಟೇಜ್-01ರ ಅನುಮೋದನೆಯಲ್ಲಿ ಉಲ್ಲೇಖಿಸಲಾಗಿರುವ ಷರತ್ತುಗಳನ್ನು ಪೂರೈಸಿ, ಅನುಸರಣಾ ವರದಿಯು ಸ್ವೀಕೃತವಾದ ನಂತರ ಅರಣ್ಯ ಸಂರಕ್ಷಣಾ ಕಾಯ್ದೆ-1980ರ ಪ್ರಕರಣ 2ರ ಅಡಿಯಲ್ಲಿ ಅಂತಿಮ ಸ್ಟೇಜ್-02ರ ಅನುಮೋದನೆಗೆ ಪ್ರಸ್ತಾವನೆಯನ್ನು ಪರಿಗಣಿಸಲಾಗುವುದು ಎಂದು ತಿಳಿಸಿರುತ್ತಾರೆ.

ದಿನಾಂಕ:11-07-2025ರಲ್ಲಿ ಪ್ರಧಾನ ಮುಖ್ಯ ಅರಣ್ಯ ಸಂರಕ್ಷಣಾಧಿಕಾರಿಗಳು, ಬೆಂಗಳೂರು ಮತ್ತು ದಿನಾಂಕ:18-07-2015 ರಂದು ಕ್ಷೇತ್ರ ನಿರ್ದೇಶಕರು, ಭದ್ರಾ ಹುಲಿ -ಸಂರಕ್ಷಿತ ಪ್ರದೇಶ, ಚಿಕ್ಕಮಗಳೂರು ಇವರಿಗೆ ಬರೆದ ಪತ್ರಗಳಲ್ಲಿ ಕುವೆಂಪು ವಿಶ್ವವಿದ್ಯಾಲಯದ ಆನ್‌ಲೈನ್ ಪ್ರಸ್ತಾವನೆಯ ಸ್ಟೇಜ್-01 ಪ್ರಕ್ರಿಯೆ ಪೂರ್ಣಗೊಂಡಿರುವುದರಿಂದ ಗುತ್ತಿಗೆ ಅವಧಿ ನವೀಕರಣಕ್ಕಾಗಿ ಎನ್.ಪಿ.ವಿ ಮೊತ್ತವನ್ನು ಪಾವತಿಸಲು 'ಡಿಮ್ಯಾಂಡ್ ನೋಟ್/ಚಲನ್' ಪ್ರತಿಯನ್ನು ಒದಗಿಸುವಂತೆ ಕೋರಲಾಗಿದೆ.

ಈ ಸಂಬಂಧ ಉಪ ಅರಣ್ಯ ಸಂರಕ್ಷಣಾಧಿಕಾರಿ ಮತ್ತು ಕ್ಷೇತ್ರ ನಿರ್ದೇಶಕರು, ಭದ್ರಾ ಹುಲಿ ಸಂರಕ್ಷಿತ ಪ್ರದೇಶ, ಚಿಕ್ಕಮಗಳೂರು-ಇವರು ದಿನಾಂಕ:25-05-2026ರಂದು ನೀಡಿರುವ ಡಿಮಾಂಡ್ ನೋಟಿಸ್‌ನಲ್ಲಿ ಅರಣ್ಯೀಕರಣದ (Compensatory Afforestation) ವೆಚ್ಚ ರೂ.37,14,95,000/-, NPV (Net Present Value) ಮೊಬಲಗು ರೂ.14,34,93,437/-ಗಳು ಮತ್ತು ಅರಣ್ಯ ಇಲಾಖೆಯ ನಿಯಮಗಳ ಉಲ್ಲಂಘನೆಯ ದಂಡದ ಬಾಬ್ತು ರೂ.48,86,63,931/- ಗಳು ಸೇರಿದಂತೆ ಒಟ್ಟು ರೂ.100,36,52,388/- (ಒಂದುನೂರು ಕೋಟಿ ಮೂವತ್ತಾರು ಲಕ್ಷದ ಐವತ್ತೆರಡು ಸಾವಿರದ ಮುನ್ನೂರಾ ಎಂಭತ್ತೆಂಟು ರೂಪಾಯಿಗಳು ಮಾತ್ರ)ಗಳನ್ನು ಪಾವತಿಸಲು ತಿಳಿಸಿರುತ್ತಾರೆ.

ಅರಣ್ಯ ಗುತ್ತಿಗೆ ನವೀಕರಣ ಮೊತ್ತ ಪಾವತಿಸುವ ಉದ್ದೇಶಕ್ಕಾಗಿ ರಾಜ್ಯ ಸರ್ಕಾರವು ಕುವೆಂಪು ವಿಶ್ವವಿದ್ಯಾಲಯಕ್ಕೆ ಈ ಹಿಂದೆ ಒಟ್ಟು ರೂ.14.32 ಕೋಟಿಗಳ (ಹದಿನಾಲ್ಕು ಕೋಟಿ ಮೂವತ್ತೆರಡು ಲಕ್ಷ ರೂಪಾಯಿಗಳು) ಅನುದಾನವನ್ನು ಬಿಡುಗಡೆ ಮಾಡಿರುತ್ತದೆ. ಇನ್ನೂ ಬಾಕಿ ರೂ.85,86,52,388.00 (ಎಂಭತ್ತೈದು ಕೋಟಿ ಎಂಭತ್ತಾರು ಲಕ್ಷದ ಐವತ್ತೆರಡು ಸಾವಿರದ ಮೂರು ನೂರ ಎಂಭತ್ತೆಂಟು ರೂಪಾಯಿಗಳು ಮಾತ್ರ) ಗಳಷ್ಟು ಕೊರತೆ ಕಂಡುಬಂದಿರುತ್ತದೆ. ಈ ಮೊತ್ತವನ್ನು ಪಾವತಿಸಲು ವಿಶ್ವದ್ಯಾಲಯದಿಂದ ಸಾಧ್ಯವಾಗುವುದಿಲ್ಲ ಹಾಗೂ ದಿನಾಂಕ:10-06-2026 ರಂದು ನಡೆದ ವಿಶ್ವವಿದ್ಯಾಲಯದ ಸಿಂಡಿಕೇಟ್ ಸಾಮಾನ್ಯ ಸಭೆಯಲ್ಲಿ ನಿರ್ಣಯ ಕೈಗೊಂಡು ಅರಣ್ಯ ಇಲಾಖೆಗೆ

ಪಾವತಿಸಬೇಕಾಗಿರುವ NPV, CA ಮತ್ತು ದಂಡದ ಮೊತ್ತ ಒಟ್ಟು ರೂ.85,86,52,388.00 (ಎಂಭತ್ತೈದು ಕೋಟಿ ಎಂಭತ್ತಾರು ಲಕ್ಷದ ಐವತ್ತೆರಡು ಸಾವಿರದ ಮೂರು ನೂರ ಎಂಬತ್ತೆಂಟು ರೂಪಾಯಿಗಳು ಮಾತ್ರ)ಗಳನ್ನು ಸರ್ಕಾರದಿಂದಲೇ ಭರಿಸುವಂತೆ ಕೋರಿ ದಿನಾಂಕ:18-06-2026 ರಂದು ಸರ್ಕಾರಕ್ಕೆ ಪ್ರಸ್ತಾವನೆ ಸಲ್ಲಿಸಲಾಗಿರುತ್ತದೆ.

ಮುಂದುವರೆದು, ಅರಣ್ಯ ಇಲಾಖೆಯಿಂದ NPV, CA ಮತ್ತು ದಂಡ ಶುಲ್ಕ ಸೇರಿ ಒಟ್ಟು ರೂ.100,36,52,388.00/-ಗಳನ್ನು ಪಾವತಿಸುವಂತೆ 'ಡಿಮ್ಯಾಂಡ್ ನೋಟ್' ನೀಡಿರುವುದನ್ನು ಮತ್ತೊಮ್ಮೆ ಮರುಪರಿಶೀಲಿಸಿ ಯಾವುದೇ ರೀತಿಯ ದಂಡವನ್ನು ವಿಧಿಸದೇ ವಿಶ್ವವಿದ್ಯಾಲಯಕ್ಕೆ ಅನುಕೂಲವಾಗುವಂತೆ ಪಾವತಿಸಬೇಕಾದ ಮೊತ್ತವನ್ನು ಮರುನಿಗದಿಪಡಿಸಬೇಕೆಂದು ಕೋರಿ ಕುವೆಂಪು ವಿಶ್ವವಿದ್ಯಾಲಯದಿಂದ ದಿನಾಂಕ:31.07.2026ರಂದು ಉಪ ಅರಣ್ಯ ಸಂರಕ್ಷಣಾಧಿಕಾರಿ ಮತ್ತು ಕ್ಷೇತ್ರ ನಿರ್ದೇಶಕರು, ಭದ್ರಾ ಹುಲಿ ಸಂರಕ್ಷಿತ ಪ್ರದೇಶ, ಚಿಕ್ಕಮಗಳೂರು ಇವರಿಗೆ ಪತ್ರ ಬರೆಯಲಾಗಿರುತ್ತದೆ.

ವಿಶ್ವವಿದ್ಯಾಲಯದಿಂದ ಅನುದಾನ ಬಿಡುಗಡೆ ಮಾಡುವಂತೆ ಸರ್ಕಾರಕ್ಕೆ ಸಲ್ಲಿಸಲಾದ ಪ್ರಸ್ತಾವನೆಗೆ ಆರ್ಥಿಕ ಇಲಾಖೆಯ ಸಹಮತಿ/ಅಭಿಪ್ರಾಯ ಕೋರಲಾಗಿದ್ದು, ಆರ್ಥಿಕ ಇಲಾಖೆಯು ದಿನಾಂಕ:11.08.2026 ರಂದು ನೀಡಿರುವ ಅಭಿಪ್ರಾಯದಲ್ಲಿ ಅರಣ್ಯ ಇಲಾಖೆ ಹಾಗೂ ಕುವೆಂಪು ವಿಶ್ವವಿದಾಲಯದೊಂದಿಗೆ ಸಭೆ ನಡೆಸಿ ವಿಶ್ವವಿದ್ಯಾಲಯಕ್ಕೆ ಮಂಜೂರಾಗಿರುವ ಒಟ್ಟು ಜಮೀನಿನಲ್ಲಿ ಅವಶ್ಯಕತೆ ಇಲ್ಲದ ಜಮೀನನ್ನು ಅರಣ್ಯ ಇಲಾಖೆಗೆ ಹಿಂದಿರುಗಿಸುವ ಕುರಿತು ಹಾಗೂ ಅರಣ್ಯ ಇಲಾಖೆಗೆ ಪಾವತಿಸಬೇಕಾದ NPV, CA ಮತ್ತು ದಂಡ ಶುಲ್ಕದ ಮೊತ್ತವನ್ನು ವಿಶ್ವವಿದ್ಯಾಲಯದ ಆಂತರಿಕ ಸಂಪನ್ಮೂಲಗಳು ಹಾಗೂ ಸ್ಥಿರ ಠೇವಣಿಗಳಿಂದ ಭರಿಸುವ ಸಾಧ್ಯತೆಗಳ ಬಗ್ಗೆ ಪರಿಶೀಲಿಸಿ ಸಂಪೂರ್ಣ ವಿವರಣೆಯೊಂದಿಗೆ ಆರ್ಥಿಕ ಇಲಾಖೆಗೆ ಪ್ರಸ್ತಾವನೆ ಸಲ್ಲಿಸುವಂತೆ ತಿಳಿಸಿರುತ್ತದೆ.

ಈ ಹಿನ್ನೆಲೆಯಲ್ಲಿ ಉನ್ನತ ಶಿಕ್ಷಣ ಇಲಾಖೆ, ಅರಣ್ಯ ಇಲಾಖೆ ಹಾಗೂ ಕುವೆಂಪು ವಿಶ್ವವಿದ್ಯಾಲಯದ ಅಧಿಕಾರಗಳೊಂದಿಗೆ ಸಭೆ ನಡೆಸುವ ಪೂರ್ವದಲ್ಲಿ ವಿಧಾನ ಪರಿಷತ್ತಿನ ಸದಸ್ಯರ ಸಲಹೆ / ಅಭಿಪ್ರಾಯ ಪಡೆದು ಕ್ರಮ ಕೈಗೊಳ್ಳಲಾಗುವುದು.

****

**ಸಂಖ್ಯೆ**: ಇಡಿ 62 ಯುಎಸ್‌ವಿ 2026

**(ಬಸವರಾಜ ರಾಯರಡ್ಡಿ)**
ಉನ್ನತ ಶಿಕ್ಷಣ ಸಚಿವರು